5. ಗಮನ ಸೆಳೆಯುವ ಸೂಚನೆ :

1) ವಿಷಯ : ಹೊಸದುರ್ಗ ತಾಲ್ಲೂಕು, ಬೋಕಿ ಕೆರೆ ಗ್ರಾಮದ ರೈತರ ತೆಂಗಿನ ತೋಟಗಳಿರುವ ಕೃಷಿ ಜಮೀನುಗಳನ್ನು ಉದ್ದೇಶಿತ ಭೂಸ್ವಾಧೀನದಿಂದ ಕೈಬಿಡುವ ಬಗ್ಗೆ

ಶ್ರೀ ಗೂಳಿಹಟ್ಟಿ ಡಿ ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ಹೊಸದುರ್ಗ ತಾಲ್ಲೂಕು, ಬೋಕಿ ಕೆರೆ ಗ್ರಾಮದ ಬಡ ರೈತರ ತೆಂಗಿನ ತೋಟಗಳಿರುವ ಕೃಷಿ ಜಮೀನುಗಳನ್ನು ಕರ್ನಾಟಕ ಗೃಹ ಮಂಡಳಿಯಿಂದ ಸ್ವಾಧೀನಪಡಿಸಿಕೊಳ್ಳಲು 4(1) ನೋಟಿಫಿಕೇಷನ್ ಹೊರಡಿಸಿದ್ದಾರೆ. ನಂತರ ಒಂದು ಕೋಮಿನ ಜನರ ಜಮೀನನ್ನು ಕೈಬಿಟ್ಟು, ಇನ್ನೊಂದು ಕೋಮಿನ ರೈತರ ಜಮೀನನ್ನು ಮಾತ್ರ ನೋಟಿಫಿಕೇಷನ್ ಮಾಡಿದ್ದರೆ. ದಯಮಾಡಿ ಅದನ್ನು ರದ್ದುಪಡಿಸಿ, ಬಡ ರೈತರ ಸಹಾಯಕ್ಕೆ ಸರ್ಕಾರ ಬರಬೇಕೆಂದು ಮಾನ್ಯ ವಸತಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ವಸತಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

ಕರ್ನಾಟಕ ಗೃಹ ಮಂಡಳಿಯ ಚಿತ್ರದುರ್ಗ ಜಿಲ್ಲಾ ಘಟಕದ ಕಾರ್ಯಪಾಲಕ ಅಭಿಯಂತರರು ದಿನಾಂಕ: 29-01-2011 ರಂದು ಕರ್ನಾಟಕ ಗೃಹ ಮಂಡಳಿಯ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು, ಕಸಬಾ ಹೋಬಳಿ, ಬೋಕಿಕೆರೆ ಗ್ರಾಮದಲ್ಲಿ ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆಗಾಗಿ 32 ಎಕರೆ 34 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಲುವಾಗಿ, ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ಹೊರಡಿಸಲು ಕೋರಿರುತ್ತಾರೆ.

ಈ ಬಗ್ಗೆ, ದಿನಾಂಕ: 22-02-2011 ರಂದು ನಡೆದ ಕರ್ನಾಟಕ ಗೃಹ ಮಂಡಳಿಯ ಸಭೆಯಲ್ಲಿ ಚರ್ಚಿಸಿ, ಸದರಿ ಜಮೀನನ್ನು ಕರ್ನಾಟಕ ಗೃಹ ಮಂಡಳಿಯ 225 ವಸತಿ ಯೋಜನೆಯಡಿ, ವಸತಿ ಯೋಜನೆ ಕೈಗೊಳ್ಳಲು ಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ಹೊರಡಿಸಲು ನಿರ್ಣಯಿಸಿರುತ್ತದೆ.

ಕರ್ನಾಟಕ ಗೃಹ ಮಂಡಳಿ ಸಭೆಯ ನಿರ್ಣಯದಂತೆ, ಕ್ರಮಾಂಕ: ಕಗೃಮಂ/ ಭೂಸ್ವಾಏ/ಚಿ/ ಬೋಕಿಕೆರೆ/ 4/2010-11, ದಿನಾಂಕ: 06-04-2011 ರಲ್ಲಿ ಭೂಸ್ವಾಧೀನ ಕಾಯ್ದೆ ಕಲಂ 4(1)ರನ್ವಯ, ಪ್ರಾಥಮಿಕ

ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 18–08–2011 ರಂದು ಪ್ರಕಟಗೊಂಡಿರುತ್ತದೆ. ವಿಜಯ ಕರ್ನಾಟಕ ಮತ್ತು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಗಳಲ್ಲಿ ದಿನಾಂಕ: 26–11–2011 ರಂದು ಪ್ರಕಟವಾಗಿರುತ್ತದೆ. ಸ್ಥಳೀಯ ಕಛೇರಿಗಳಲ್ಲಿಯೂ ಸಹ ಪ್ರಕಟಿಸಿ ಅಧಿಸೂಚನೆಯ ಪತ್ರಿಯನ್ನು ಎಲ್ಲಾ ಭೂಮಾಲೀಕರಿಗೂ ಸಹ ಜಾರಿ ಮಾಡಲಾಗಿದೆ. ಸದರಿ ಪ್ರಾಥಮಿಕ ಅಧಿಸೂಚನೆಗೆ ಸಂಬಂಧಿಸಿದಂತೆ ಇದುವರೆವಿಗೂ 16 ಜನರಿಂದ ಆಕ್ಷೇಪಣೆ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಆ ಎಲ್ಲಾ ಆಕ್ಷೇಪಣಾ ಅರ್ಜಿಗಳ ಬಗ್ಗೆ, ಭೂಸ್ವಾಧೀನ ಕಾಯ್ದೆ ಕಲಂ 5(ಎ) ರಡಿಯಲ್ಲಿ ಅವರುಗಳಿಗೆ ನೋಟೀಸ್ ನೀಡಿ ವಿಚಾರಣೆ ನಡೆಸುವ ಹಂತದ ಲ್ಲಿರುತ್ತದೆ. ವಿಚಾರಣಾ ಸಮಯದಲ್ಲಿ, ಎಲ್ಲಾ ಸಂಬಂಧಿತ ಅಂಶಗಳನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

2) ವಿಷಯ: **ಸಕಲೇಶಪುರ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಏಲಕ್ಕಿ ಬೆಳೆ ನಾಶವಾಗಿದ್ದು, ಈ ಬೆಳೆಗಾರರ ಸಾಲವನ್ನು ಸಂಪೂರ್ಣ ಮನ್ನಾ ಮಾಡುವ ಬಗ್ಗೆ**

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಮಾನ್ಯ ಸಭಾಧ್ಯಕ್ಷರೆ, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಮತ್ತು ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಏಲಕ್ಕಿ ಬೆಳೆಗೆ ಕೊಕ್ಕೆಕಂದು ಮತ್ತು ಕಚ್ಚೆರೋಗ ತಗುಲಿ ಬೆಳೆ ನಾಶವಾಗಿದ್ದು, ಈ ಬೆಳಗಾರರ ಸಂಪೂರ್ಣ ಸಾಲ ಮನ್ನಾ ಮಾಡುವ ಬಗ್ಗೆ ಮಾನ್ಯ ತೋಟಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಹಾಗೂ ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ,

ರಾಜ್ಯದ ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಪೈಕಿ ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಮಾತ್ರ ಏಲಕ್ಕಿ ಬೆಳೆಗೆ ಸಾಲ ನೀಡಲಾಗಿದೆ. ಫೆಬ್ರವರಿ 2012 ರ ಅಂತ್ಯಕ್ಕೆ 800 ಸದಸ್ಯರಿಂದ ರೂ.352.23 ಲಕ್ಷಗಳ ಹೊರಬಾಕಿ ಇರುತ್ತದೆ. ಈ ಪೈಕಿ 20 ಸದಸ್ಯರಿಂದ ರೂ.10.70 ಲಕ್ಷಗಳ ಸಾಲ ಮಾತ್ರ ಸುಸ್ತಿಯಾಗಿರುತ್ತವೆ.